# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ-೧೫೫<br>Volume-155 | ಬೆಂಗಳೂರು, ಗುರುವಾರ, ೦೭, ಮೇ, ೨೦೨೦ (ವೈಶಾಖ, ೧೭, ಶಕವರ್ಷ ೧೯೪೨)<br>Bengaluru, THURSDAY, 07, MAY, 2020 (Vaishakha 17, ShakaVarsha 1942) | ಸಂಚಿಕೆ-೧೯<br>Issue - 19 |
|---|---|---|


## ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಛ ನ್ಯಾಯಾಲಯವು ಮಾಡಿದ ನಿಯಮಗಳು

### ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 345 ಎಲ್ಇಟಿ 2011

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:4/05/2020

### ಅಧಿಸೂಚನೆ

ಕರ್ನಾಟಕ ಸರ್ಕಾರ ಈ ಕೆಳಕಂಡ ಕರಡು ನಿಯಮಗಳನ್ನು ಕರ್ನಾಟಕ ಕಾರ್ಮಿಕ ಸೇವೆಗಳು (ವೃಂದ ಮತ್ತು ನೇಮಕಾತಿ) ನಿಯಮಾವಳಿಗಳು, 2019ರ ಕರಡು ನಿಯಮಗಳನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 3ನೇ ಪ್ರಕರಣದ (2)ನೇ ಉಪ ಪ್ರಕರಣದಿಂದ ಅಗತ್ಯಪಡಿಸಿದಂತೆ, ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ, ಅದನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಲಹೆ/ಆಕ್ಷೇಪಣೆಗಳನ್ನು ಅಹ್ವಾನಿಸಿ, ದಿನಾಂಕ: 20ನೇ ಫೆಬ್ರವರಿ, 2020 ರ ಕರ್ನಾಟಕ ರಾಜ್ಯಪತ್ರದ ಭಾಗ IV-A ಅಧಿಸೂಚನೆ ಸಂಖ್ಯೆ: ಕಾಇ 345 ಎಲ್ಇಟಿ 2011, ದಿನಾಂಕ:06/02/2020 ರಲ್ಲಿ ಪ್ರಕಟಿಸಿದ್ದುದರಿಂದ;



Scanned with CamScanner

ಮತ್ತು ಸದರಿ ರಾಜ್ಯ ಪತ್ರವನ್ನು 20ನೇ ಫೆಬ್ರವರಿ, 2020ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದ್ದುದರಿಂದ;

ಮತ್ತು ರಾಜ್ಯ ಸರ್ಕಾರವು ಸದರಿ ಕರಡಿನ ಸಂಬಂಧದಲ್ಲಿ ಮೇಲೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸ್ವೀಕರಿಸಿದ ಆಕ್ಷೇಪಣೆಗಳನ್ನು / ಸಲಹೆಗಳನ್ನು ಪರಿಗಣಿಸಿರುವುದರಿಂದ;

ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮುಂದಿನ ನಿಯಮಗಳನ್ನು ರಚಿಸುತ್ತದೆ.

## ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ: 1. ಈ ನಿಯಮಗಳನ್ನು ಕರ್ನಾಟಕ ಕಾರ್ಮಿಕ ಸೇವೆಗಳು (ವೃಂದ ಮತ್ತು ನೇಮಕಾತಿ) ನಿಯಮಾವಳಿಗಳು, 2020 ಎಂದು ಕರೆಯತಕ್ಕದ್ದು,
   2. ಅವುಗಳು ಸರ್ಕಾರದ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು,

2. ನೇಮಕಾತಿ ವಿಧಾನ ಮತ್ತು ಕನಿಷ್ಠ ಅರ್ಹತೆ:- ಕರ್ನಾಟಕ ರಾಜ್ಯ ಕಾರ್ಮಿಕ ಸೇವೆಗಳು, ಈ ಕೆಳಗಿನ ಕಲಂ 2ರಲ್ಲಿ ನಿರ್ದಿಷ್ಟಪಡಿಸಿದ ವೇತನ ಶ್ರೇಣಿಯನ್ನು ಹೊಂದಿರುವ ಹುದ್ದೆಗಳ ಪ್ರತಿಯೊಂದು ಪ್ರವರ್ಗವನ್ನು ಒಳಗೊಂಡಿರತಕ್ಕದ್ದು ಮತ್ತು ಹುದ್ದೆಗಳ ಸಂಖ್ಯೆ, ನೇಮಕಾತಿಯ ವಿಧಾನ ಮತ್ತು ಕನಿಷ್ಠ ಅರ್ಹತೆ, ಯಾವುದಾದರೂ ಇದ್ದರೆ, ಅದು ಕಲಂ(3), (4) ಮತ್ತು (5)ರಲ್ಲಿ ಸಂವಾದಿ ನಮೂನೆಗಳಲ್ಲಿ ನಿರ್ದಿಷ್ಟಪಡಿಸುವಂತಿರತಕ್ಕದ್ದು,

3. ನಿರಸನ ಮತ್ತು ಉಳಿಸುವಿಕೆಗಳು:-1. ಮೈಸೂರು ಕಾರ್ಮಿಕ ಸೇವೆಗಳು (ನೇಮಕಾತಿ) ನಿಯಮಾವಳಿಗಳು, 1967ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.
   i. ಪರಂತು, ಅಂಥ ನಿರಸನವು ಸದರಿ ನಿಯಮಗಳ ಈ ಹಿಂದಿನ ಪ್ರವರ್ತನೆಗೆ ಅಥವಾ ಅದರ ಅಡಿಯಲ್ಲಿ ಯುಕ್ತವಾಗಿ ಮಾಡಿದ ಯಾವುದೇ ಕಾರ್ಯಕ್ಕೆ ಅಥವಾ ಕೈಗೊಳ್ಳಲಾದ ಯವುದೇ ಕ್ರಮಕ್ಕೆ ಅಥವಾ,
   ii. ಸದರಿ ನಿಯಮಗಳ ಅಡಿಯಲ್ಲಿ ಅರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕಿಗೆ ವಿಶೇಷಾಧಿಕಾರಕ್ಕೆ, ಬಾಧ್ಯತೆಗೆ ಅಥವಾ ಹೊಣೆಗಾರಿಕೆಗೆ ಬಾಧಕ ಉಂಟು ಮಾಡತಕ್ಕದ್ದಲ್ಲ.

### ಅನುಸೂಚಿ

(ನಿಯಮ 2 ನೋಡಿ)

| ಕ್ರ. ಸಂ. | ಹುದ್ದೆಗಳ ಪ್ರವರ್ಗ ಮತ್ತು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | | | ಒಟ್ಟು | ನೇಮಕಾತಿ ವಿಧಾನ | ಕನಿಷ್ಠ ಅರ್ಹತೆ |
|---|---|---|---|---|---|---|---|
| | | ಖಾಯಂ | ತಾತ್ಕಾಲಿಕ | ನಿಯೋಜನೆಗಾಗಿ ಮೀಸಲು | | | |
| | | (3) | | | | (4) | (5) |
| (1) | (2) | (a) | (b) | (c) | | | |
| 1. | ಕಾರ್ಮಿಕ ಆಯುಕ್ತರು | 01 | – | – | 01 | Encadered to IAS | – |

| | | | | | | | |
|---|---|---|---|---|---|---|---|
| 2. | ಅಪರ ಕಾರ್ಮಿಕ ಆಯುಕ್ತರು (90500–123300) | 02 | – | – | 02 | ಜಂಟಿ ಕಾರ್ಮಿಕ ಆಯುಕ್ತರ ವೃಂದದಿಂದ ಬಡ್ತಿ ಮೂಲಕ ಭರ್ತಿ ಮಾಡುವುದು. | ಜಂಟಿ ಕಾರ್ಮಿಕ ಆಯುಕ್ತರ ಹುದ್ದೆಯಲ್ಲಿ ಕನಿಷ್ಠ 02 ವರ್ಷಗಳ ಸೇವೆ ಸಲ್ಲಿಸಿರತಕ್ಕದ್ದು. |
| 3. | ಜಂಟಿ ಕಾರ್ಮಿಕ ಆಯುಕ್ತರು (74400–109600) | 01 | – | 03 | 04 | ಉಪ ಕಾರ್ಮಿಕ ಆಯುಕ್ತರ ವೃಂದದಿಂದ ಬಡ್ತಿ ಮೂಲಕ ಭರ್ತಿ ಮಾಡುವುದು. | ಉಪ ಕಾರ್ಮಿಕ ಆಯುಕ್ತರ ಹುದ್ದೆಯಲ್ಲಿ ಕನಿಷ್ಠ 02 ವರ್ಷಗಳ ಸೇವೆ ಸಲ್ಲಿಸಿರತಕ್ಕದ್ದು. |
| 4. | ಉಪ ಕಾರ್ಮಿಕ ಆಯುಕ್ತರು (67550–104600) | 06 | – | 04 | 10 | ಸಹಾಯಕ ಕಾರ್ಮಿಕ ಆಯುಕ್ತರ ವೃಂದದಿಂದ ಬಡ್ತಿ ಮೂಲಕ ಭರ್ತಿ ಮಾಡುವುದು. | ಸಹಾಯಕ ಕಾರ್ಮಿಕ ಆಯುಕ್ತರ ಹುದ್ದೆಯಲ್ಲಿ ಕನಿಷ್ಠ 03 ವರ್ಷಗಳ ಸೇವೆ ಸಲ್ಲಿಸಿರತಕ್ಕದ್ದು |
| 5. | ಸಹಾಯಕ ಕಾರ್ಮಿಕ ಆಯುಕ್ತರು (52650–97100) | 12 | – | 07 | 19 | ಶೇಕಡಾ 50ರಷ್ಟು ನೇರ ನೇಮಕಾತಿ ಕರ್ನಾಟಕ ಪತ್ರಾಂಕಿತ ಪರೀಕ್ಷಾರ್ಥಿಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷಾ ನೇಮಕಾತಿ) ನಿಯಮಾವಳಿ, 1997 ಅನ್ವಯ ಭರ್ತಿ ಮಾಡುವುದು.<br>ಮತ್ತು;<br>ಶೇಕಡಾ 50ರಷ್ಟು ಹುದ್ದೆಗಳನ್ನು ಕಾರ್ಮಿಕ ಅಧಿಕಾರಿ ವೃಂದದಿಂದ ಬಡ್ತಿ ಮೂಲಕ ಭರ್ತಿ ಮಾಡುವುದು. | <u>ನೇರ ನೇಮಕಾತಿಗಾಗಿ:</u><br>ಕರ್ನಾಟಕ ಪತ್ರಾಂಕಿತ ಪರೀಕ್ಷಾರ್ಥಿಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷಾ ನೇಮಕಾತಿ) ನಿಯಮಾವಳಿ, 1997 ಅನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡುವುದು.<br><u>ಬಡ್ತಿಗಾಗಿ:</u><br>ಕಾರ್ಮಿಕ ಅಧಿಕಾರಿ ವೃಂದದಲ್ಲಿ 03 ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 6. | ಪತ್ರಾಂಕಿತ ವ್ಯವಸ್ಥಾಪಕರು (52650–97100) | 01 | – | – | 01 | ವ್ಯವಸ್ಥಾಪಕರು (ಆಡಳಿತ / ಪ್ರಚಾರ ಮತ್ತು ಅಂಕಿಅಂಶ)ವೃಂದದಿಂದ ಬಡ್ತಿ ಮೂಲಕ ತುಂಬತಕ್ಕದ್ದು. | ವ್ಯವಸ್ಥಾಪಕರು (ಆಡಳಿತ / ಪ್ರಚಾರ ಮತ್ತು ಅಂಕಿಅಂಶ)ವೃಂದದಲ್ಲಿ 03 ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 7. | ಕಾರ್ಮಿಕ ಅಧಿಕಾರಿ (40900–78200) | 42 | – | 09 | 51 | ಶೇಕಡಾ 50ರಷ್ಟು ನೇರ ನೇಮಕಾತಿ ಮೂಲಕ ಕರ್ನಾಟಕ ಪತ್ರಾಂಕಿತ ಪರೀಕ್ಷಾರ್ಥಿಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷಾ ನೇಮಕಾತಿ) ನಿಯಮಾವಳಿ, 1997 ಅನ್ವಯ ಭರ್ತಿ ಮಾಡುವುದು ಮತ್ತು | • <u>ನೇರನೇಮಕಾತಿಗಾಗಿ:</u><br>ಕರ್ನಾಟಕ ಪತ್ರಾಂಕಿತ ಪರೀಕ್ಷಾರ್ಥಿಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷಾ ನೇಮಕಾತಿ) ನಿಯಮಾವಳಿ, 1997 ಅನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡುವುದು.<br>• <u>ಬಡ್ತಿಗಾಗಿ:</u> |

Scanned with CamScanner

| | | | | | | | |
|---|---|---|---|---|---|---|---|
| | | | | | | ಶೇಕಡಾ 50ರಷ್ಟು ಹುದ್ದೆಗಳನ್ನು ಹಿರಿಯ ಕಾರ್ಮಿಕ ನಿರೀಕ್ಷಕರ ವೃಂದದಿಂದ ಬಡ್ತಿ ಮೂಲಕ ತುಂಬತಕ್ಕದ್ದು. | ಹಿರಿಯ ಕಾರ್ಮಿಕ ನಿರೀಕ್ಷಕರ ವೃಂದದಲ್ಲಿ 03 ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆ... ಸಲ್ಲಿಸಿರತಕ್ಕದ್ದು. |
| 8. | ವ್ಯವಸ್ಥಾಪಕರು (ಲೆಕ್ಕಪತ್ರ) (40900–78200) | 01 | – | – | 01 | ಕರ್ನಾಟಕ ರಾಜ್ಯ ಆಡಿಟ್ ಮತ್ತು ಲೆಕ್ಕಪತ್ರ ಇಲಾಖೆಯಿಂದ ಲೆಕ್ಕ ಅಧೀಕ್ಷಕರನ್ನು ನಿಯೋಜನೆ ಮೂಲಕ ಭರ್ತಿ ಮಾಡುವುದು | – |
| 9. | ವ್ಯವಸ್ಥಾಪಕರು (ಆಡಳಿತ) / (ಪ್ರಚಾರ ಮತ್ತು ಅಂಕಿ–ಅಂಶ) (40900–78200) | 01 +01 | – | – | 02 | ಅಧೀಕ್ಷಕರ ವೃಂದದಿಂದ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡುವುದು | ಅಧೀಕ್ಷಕರ ವೃಂದದಲ್ಲಿ 03 ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 10. | ಜೂನಿಯರ್ ಪ್ರೋಗ್ರಾಮರ್ (40900–78200) | – | – | 01 | 01 | ಇ_ಆಡಳಿತ ಇಲಾಖೆಯಿಂದ ಸಮಾನ ವೃಂದದ ಅಧಿಕಾರಿಯನ್ನು ನಿಯೋಜನೆ ಮೂಲಕ ಭರ್ತಿ ಮಾಡುವುದು. | – |
| 11. | ಅಧೀಕ್ಷಕರು (37900–70850) | 08 | – | – | 08 | ಪ್ರಥಮ ದರ್ಜೆ ಸಹಾಯಕರ ಹಾಗೂ ಶೀಘ್ರಲಿಪಿಗಾರರ ವೃಂದದಿಂದ 5:3ರ ಅನುಪಾತದಲ್ಲಿ ಬಡ್ತಿ ಮೂಲಕ ಭರ್ತಿ ಮಾಡುವುದು ಮತ್ತು ಪ್ರತಿ 3ನೇ, 6ನೇ ಮತ್ತು 8ನೇ ಹುದ್ದೆಯನ್ನು ಶೀಘ್ರಲಿಪಿಗಾರರ ವೃಂದದಿಂದ ಬಡ್ತಿ ಮೂಲಕ ತುಂಬತಕ್ಕದ್ದು. | • <u>ಬಡ್ತಿಗಾಗಿ:</u> ಪ್ರಥಮ ದರ್ಜೆ ಸಹಾಯಕರ ಹಾಗೂ ಶೀಘ್ರಲಿಪಿಗಾರರ ವೃಂದದಲ್ಲಿ 03 ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 12. | ಹಿರಿಯ ಕಾರ್ಮಿಕ ನಿರೀಕ್ಷಕರು (37900–70850) | 83 | – | 07 | 90 | ಕಾರ್ಮಿಕ ನಿರೀಕ್ಷಕರ ವೃಂದದಿಂದ ಬಡ್ತಿ ಮೂಲಕ ತುಂಬತಕ್ಕದ್ದು. | ಕಾರ್ಮಿಕ ನಿರೀಕ್ಷಕರ ವೃಂದದಲ್ಲಿ 03 ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 13. | ಕಾರ್ಮಿಕ ನಿರೀಕ್ಷಕರು (33450–62600) | 145 | 19 | – | 164 | • <u>ನೇರ ನೇಮಕಾತಿ:</u> ಶೇಕಡಾ 50ರಷ್ಟು ನೇರ ನೇಮಕಾತಿ ಮೂಲಕ ಕರ್ನಾಟಕ ನಾಗರೀಕ | • <u>ನೇರ ನೇಮಕಾತಿಗಾಗಿ:</u> ಕಾನೂನಿನಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಪದವಿ ಹೊಂದಿರಬೇಕು. |

Scanned with CamScanner

| | | | | | | | |
|---|---|---|---|---|---|---|---|
| | | | | | | ಸೇವೆಗಳು (ನೇರ ನೇಮಕಾತಿ, ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಆಯ್ಕೆ) (ಸಾಮಾನ್ಯ) ನಿಯಮಾವಳಿ, 2006 ಮತ್ತು;<br>• <u>ಬಡ್ತಿ:</u><br>ಶೇಕಡಾ 50ರಷ್ಟು ಹುದ್ದೆಗಳನ್ನು ಪ್ರಥಮ ದರ್ಜೆ ಸಹಾಯಕರ ಹಾಗೂ ಶೀಘ್ರಲಿಪಿಗಾರರ ವೃಂದದಿಂದ 5:3ರ ಅನುಪಾತದಲ್ಲಿ ಬಡ್ತಿ ಮೂಲಕ ತುಂಬತಕ್ಕದ್ದು ಮತ್ತು ಪ್ರತಿ 3ನೇ, 6ನೇ ಮತ್ತು 8ನೇ ಹುದ್ದೆಯನ್ನು ಶೀಘ್ರಲಿಪಿಗಾರರ ವೃಂದದಿಂದ ಬಡ್ತಿ ಮೂಲಕ ತುಂಬತಕ್ಕದ್ದು.<br><u>ಸೂಚನೆ:</u> ಪ್ರಥಮ ದರ್ಜೆ ಸಹಾಯಕರು ಹಾಗೂ ಶೀಘ್ರಲಿಪಿಗಾರರು ಯಾವ ಚಾನಲ್‌ನಲ್ಲಿ ಮುಂಬಡ್ತಿ ಹೊಂದಲಿಚ್ಛಿಸುವರೆಂಬುದಕ್ಕೆ ತಮ್ಮ ಇಚ್ಛೆಯನ್ನು ಒಮ್ಮೆ ಲಿಖಿತವಾಗಿ ನೀಡಬೇಕು ಹಾಗೂ ಅದನ್ನು ಬದಲಾಯಿಸುವಂತಿಲ್ಲ. | <u>ಬಡ್ತಿಗಾಗಿ:</u><br>ಪ್ರಥಮ ದರ್ಜೆ ಸಹಾಯಕರ ಹಾಗೂ ಶೀಘ್ರಲಿಪಿಗಾರರ ವೃಂದದಲ್ಲಿ <u>03</u> ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 14. | ಸಹಾಯಕ ಸಾಂಖ್ಯಿಕ ಅಧಿಕಾರಿ (37900–70850) | 02 | – | – | 02 | ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ಸಮಾನಾಂತರ ಹುದ್ದೆಯ ಅಧಿಕಾರಿಯನ್ನು ನಿಯೋಜನೆ ಮೂಲಕ ಭರ್ತಿ ಮಾಡುವುದು. | – |
| 15. | ಪ್ರಥಮ ದರ್ಜೆ ಸಹಾಯಕರು (27650–52650) | 80 | – | 05 | 85 | • <u>ನೇರ ನೇಮಕಾತಿ:</u><br>- ಶೇಕಡಾ 50ರಷ್ಟು ನೇರ ನೇಮಕಾತಿ ಕರ್ನಾಟಕ ನಾಗರೀಕ ಸೇವಾ (ಲಿಪಿಕ ವರ್ಗದ ನೇಮಕಾತಿ) ನಿಯಮಾವಳಿ, 1978ರ ಅನ್ವಯ ಮೂಲಕ ಭರ್ತಿ | • <u>ನೇರ ನೇಮಕಾತಿಗಾಗಿ:</u><br>- ಕರ್ನಾಟಕ ನಾಗರೀಕ ಸೇವಾ (ಲಿಪಿಕ ವರ್ಗದ ನೇಮಕಾತಿ) ನಿಯಮಾವಳಿ, 1978ರ ಅನ್ವಯ ನೇಮಕಾತಿ.<br>• <u>ಬಡ್ತಿಗಾಗಿ:</u> |

Scanned with CamScanner

| | | | | | | | |
|---|---|---|---|---|---|---|---|
| | | | | | | ಮಾಡುವುದು<br>• <u>ಬಡ್ತಿ:</u><br>- ಶೇಕಡಾ 50ರಷ್ಟು ಹುದ್ದೆಗಳನ್ನು ದ್ವಿತೀಯ ದರ್ಜೆ ಸಹಾಯಕರ ವೃಂದದಿಂದ ಬಡ್ತಿ ಮೂಲಕ ಭರ್ತಿ ಮಾಡುವುದು | - ದ್ವಿತೀಯ ದರ್ಜೆ ಸಹಾಯಕರ ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು.<br>- 05 ವರ್ಷ ಸೇವೆ ಪೂರೈಸಿದ ನೌಕರರು ಲಭ್ಯವಿಲ್ಲದಿದ್ದಲ್ಲಿ 03 ವರ್ಷ ಸೇವೆ ಪೂರೈಸಿದ ನೌಕರರನ್ನು ಪರಿಗಣಿಸತಕ್ಕದ್ದು. |
| 16. | ಶೀಘ್ರಲಿಪಿಗಾರರು (27650–52650) | 52 | – | – | 52 | 67%ರಷ್ಟು ನೇರ ನೇಮಕಾತಿ ಮೂಲಕ ಕರ್ನಾಟಕ ನಾಗರೀಕ ಸೇವಾ (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳ ನೇಮಕಾತಿ) ನಿಯಮಗಳು, 1983ರ ಮೂಲಕ; ಮತ್ತು<br><br>33%ರಷ್ಟು –ಹುದ್ದೆಗಳನ್ನು ಬೆರಳಚ್ಚುಗಾರರ ವೃಂದದಿಂದ ಬಡ್ತಿ ಮೂಲಕ ತುಂಬತಕ್ಕದ್ದು. | <u>ನೇರ ನೇಮಕಾತಿಗಾಗಿ:</u> ಕರ್ನಾಟಕ ನಾಗರೀಕ ಸೇವಾ (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳ ನೇಮಕಾತಿ) ನಿಯಮಗಳು, 1983ರ ಅನುಸಾರವಾಗಿ.<br><u>ಮುಂಬಡ್ತಿಗಾಗಿ:</u><br>(1) ಬೆರಳಚ್ಚುಗಾರರ ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸತಕ್ಕದ್ದು.<br><br>(2)ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಪ್ರೌಢ ದರ್ಜೆ ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ಪರೀಕ್ಷೆಯಲ್ಲಿ ಉತ್ತೀರ್ಣರಾಗತಕ್ಕದ್ದು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರತಕ್ಕದ್ದು. |
| 17. | ದ್ವಿತೀಯದರ್ಜೆ ಸಹಾಯಕರು (21400–42000) | 78 | 06 | 02 | 86 | ಕರ್ನಾಟಕ ರಾಜ್ಯ ನಾಗರೀಕ ಸೇವಾ (ಲಿಪಿಕ ವರ್ಗದ ನೇಮಕಾತಿ) ನಿಯಮಗಳು, 1978ರ ಅನುಸಾರ 67%ರಷ್ಟು ನೇರ ನೇಮಕಾತಿ ಮೂಲಕ ಮತ್ತು;<br>33%ರಷ್ಟು ಹುದ್ದೆಗಳನ್ನು ಮುಂಬಡ್ತಿಯಿಂದ ಆಫಿಸ್ ಅಟೆಂಡರ್ಸ್ ಗ್ರೇಡ್–1 ವೃಂದದಿಂದ ಹಾಗೂ ವಾಹನ ಚಾಲಕರ ವರ್ಗಾವಣೆಯಿಂದ 7:1 ಅನುಪಾತದಲ್ಲಿ (ಆಫಿಸ್ ಅಟೆಂಡರ್ಸ್ | • <u>ನೇರ ನೇಮಕಾತಿಗಾಗಿ:</u><br>ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಲಿಪಿಕ ವರ್ಗದ ನೇಮಕಾತಿ) ನಿಯಮಗಳು, 1978ರ ಅನುಸಾರ<br><u>ಬಡ್ತಿಗಾಗಿ:</u><br>ಎಸ್.ಎಸ್.ಎಲ್.ಸಿ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಆಫಿಸ್ ಅಟೆಂಡರ್ಸ್ ಗ್ರೇಡ್–1 ಹಾಗೂ ವಾಹನ ಚಾಲಕರ ವೃಂದದಲ್ಲಿ |

| | | | | | | | |
|---|---|---|---|---|---|---|---|
| | | | | | | ಗ್ರೇಡ್–1: ವಾಹನ ಚಾಲಕರು). ಮುಂಬಡ್ತಿಗೆ ಮೊದಲ ಆದ್ಯತೆಯನ್ನು ವಾಹನ ಚಾಲಕರಿಗೆ ನೀಡಲಾಗುವುದು. ಆಫಿಸ್ ಅಟೆಂಡರ್ಸ್ ಗ್ರೇಡ್–1/ವಾಹನ ಚಾಲಕರ ವೃಂದದಲ್ಲಿ ಇರುವಾಗ ಬದಲಾಯಿಸಲಾಗದ ಆಯ್ಕೆಯನ್ನು ಬಳಸಲಾಗುವುದು. | 05 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸತಕ್ಕದ್ದು.<br>05 ವರ್ಷಗಳಿಗಿಂತ ಕಡಿಮೆ ಇಲ್ಲದಂತ ಸೇವೆ ಸಲ್ಲಿಸಿರುವ ನೌಕರರು ಲಭ್ಯವಿಲ್ಲದಿದ್ದಲ್ಲಿ 3 ವರ್ಷಗಳ ಸೇವೆಯನ್ನು ಸಲ್ಲಿಸಿರುವ ನೌಕಕರರನ್ನು ಮುಂಬಡ್ತಿಗೆ ಪರಿಗಣಿಸುವುದು. |
| 18. | ಬೆರಳಚ್ಚುಗಾರರು (21400–42000) | 30 | – | – | 30 | 90%ರಷ್ಟು ನೇರ ನೇಮಕಾತಿ ಮೂಲಕ ಕರ್ನಾಟಕ ನಾಗರೀಕ ಸೇವಾ (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳ ನೇಮಕಾತಿ) ನಿಯಮಗಳು, 1983ರ ಮೂಲಕ; ಮತ್ತು<br>10%ರಷ್ಟು ಆಫೀಸ್ ಅಟೆಂಡರ್–ಗ್ರೇಡ್–1 ವೃಂದದಿಂದ ಬಡ್ತಿ ಮೂಲಕ ತುಂಬತಕ್ಕದ್ದು.<br>ಮುಂಬಡ್ತಿಗಾಗಿ ಅರ್ಹ ನೌಕರರು ಲಭ್ಯವಿಲ್ಲದಿದ್ದಲ್ಲಿ ನೇರ ನೇಮಕಾತಿಯಿಂದ ಭರ್ತಿ ಮಾಡತಕ್ಕದ್ದು. | <u>ನೇರ ನೇಮಕಾತಿಗಾಗಿ</u>: ಕರ್ನಾಟಕ ನಾಗರೀಕ ಸೇವಾ (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳ ನೇಮಕಾತಿ) ನಿಯಮಗಳು, 1983ರ ಅನುಸಾರವಾಗಿ.<br><u>ಮುಂಬಡ್ತಿಗಾಗಿ</u>:<br>(1) ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸುವ ಕನ್ನಡ ಬೆರಳಚ್ಚು ಪ್ರೌಢದರ್ಜೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು.<br>(2) ಆಫೀಸ್ ಅಟೆಂಡರ್–ಗ್ರೇಡ್–1 ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆ ಪೂರೈಸಿರತಕ್ಕದ್ದು.<br>(3) 05 ವರ್ಷ ಪೂರೈಸಿದ ನೌಕರರು ಲಭ್ಯವಿಲ್ಲದಿದ್ದಲ್ಲಿ 03 ವರ್ಷ ಸೇವೆ ಪೂರೈಸಿದ ನೌಕರರನ್ನು ಪರಿಗಣಿಸತಕ್ಕದ್ದು. |
| 19. | ಚಾಲಕ (21400–42000) | 11 | 03 | – | 14 | • <u>ನೇರ ನೇಮಕಾತಿ:</u><br>ನೇರ ನೇಮಕಾತಿ ಮೂಲಕ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಾವಳಿಗಳು, 2006. | (1)ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರತಕ್ಕದ್ದು.<br>(2)ಲಘು ವಾಹನ ಚಾಲನಾ ಪರವಾನಗಿ ಮತ್ತು ಬ್ಯಾಡ್ಜ್ ಹೊಂದಿರತಕ್ಕದ್ದು. |

Scanned with CamScanner

| | | | | | | | |
|---|---|---|---|---|---|---|---|
| 20. | ಆಫೀಸ್ ಅಟೆಂಡರ್ ಗ್ರೇಡ್–I (18600–32600) | 100 | – | – | 100 | ಶೇಕಡ 67ರಷ್ಟು ನೇರ ನೇಮಕಾತಿ ಮೂಲಕ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಾವಳಿಗಳು, 2006 ಮತ್ತು;<br>33%ರಷ್ಟು ಆಫೀಸ್ ಅಟೆಂಡರ್, ಸ್ವೀಪರ್ ಮತ್ತು ವಾಚ್‌ಮೆನ್ ಹುದ್ದೆಗಳ ಸಂಯೋಜಿತ ಜೇಷ್ಠತೆಯಂತೆ ಮುಂಬಡ್ತಿ ನೀಡುವುದು.<br>ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಾವಳಿಗಳು, 2006ರನ್ವಯ ಜೇಷ್ಠತೆಯಲ್ಲಿ ಹಿರಿಯರಾದ ಹೆಚ್ಚಿನ ವೇತನವನ್ನು ಪಡೆಯುತ್ತಿರುವ ವ್ಯಕ್ತಿಯನ್ನು ಮುಂಬಡ್ತಿ ಆಯ್ಕೆಗಾಗಿ ಪರಿಗಣಿಸತಕ್ಕದ್ದು. | <u>ನೇರನೇಮಕಾತಿ:</u><br>(1)ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಕನ್ನಡವನ್ನು ಒಂದು ಭಾಷೆಯಾಗಿ ತೆಗೆದುಕೊಂಡು ಉತ್ತೀರ್ಣರಾಗಿರತಕ್ಕದ್ದು.<br><u>ಮುಂಬಡ್ತಿಗಾಗಿ:</u><br>ಆಫೀಸ್ ಅಟೆಂಡರ್, ಸ್ವೀಪರ್ ಮತ್ತು ವಾಚ್‌ಮೆನ್ ಹುದ್ದೆಗಗಳಲ್ಲಿ 10 ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆ ಪೂರೈಸಿರತಕ್ಕದ್ದು. |
| 21. | ಆಫೀಸ್ ಅಟೆಂಡರ್ (17000–28950) | 161 | – | – | 161 | <u>ನೇರ ನೇಮಕಾತಿ</u><br>ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ನೇರ ನೇಮಕಾತಿ ಮತ್ತುಆಯ್ಕೆ) (ಸಾಮಾನ್ಯ) ನಿಯಮಾವಳಿಗಳು, 2006 | ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಕನ್ನಡವನ್ನು ಒಂದು ಭಾಷೆಯಾಗಿ ತೆಗೆದುಕೊಂಡು ಉತ್ತೀರ್ಣರಾಗಿರ ತಕ್ಕದ್ದು. |
| 22. | ಕಸ ಗುಡಿಸುವವರು (ಸ್ವೀಪರ್) (17000–28950) | 01 | – | – | 01 | <u>ನೇರ ನೇಮಕಾತಿ</u><br>ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಾವಳಿಗಳು, 2006. | ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಕನ್ನಡವನ್ನು ಒಂದು ಭಾಷೆಯಾಗಿ ತೆಗೆದುಕೊಂಡು ಉತ್ತೀರ್ಣರಾಗಿರ ತಕ್ಕದ್ದು. |

Scanned with CamScanner

| | | | | | | | |
|---|---|---|---|---|---|---|---|
| 23. | ಕಾವಲುಗಾರ (ವಾಚ್‌ಮನ್) (17000–28950) | 03 | – | – | 03 | <u>ನೇರ ನೇಮಕಾತಿ</u> ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಾವಳಿಗಳು, 2006. | ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಕನ್ನಡವನ್ನು ಒಂದು ಭಾಷೆಯಾಗಿ ತೆಗೆದುಕೊಂಡು ಉತ್ತೀರ್ಣರಾಗಿರತಕ್ಕದ್ದು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಂಧ್ಯಾ. ಎಲ್. ನಾಯಕ್)
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

**GOVERNMENT OF KARNATAKA**

**Karnataka Government**

**No. LD 345 LET 2011**
**Secretariat,**

**Vikasa Soudha,Bengaluru,**

**Dated :04/05/2020**

## NOTIFICATION

**The Government of Karnataka has made the following draft rules; Karnataka Labour Services (Cadre and Recruitment) Rules, 2019 as required by sub-section (2) of section 3 of the Karnataka State Civil Services Act,**

Scanned with CamScanner